ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ ಜೆ.ಎಂ.ಎಫ್.ಸಿ ನ್ಯಾಯಾಲಯ, ತರೀಕೆರೆ

ಸಿ.ಸಿ.ಸಂಖ್ಯೆ.1129/2022

ಉಪಸ್ಥಿತರುಃ

ಶ್ರೀ ಸಂತೋಷ ಕುಮಾರ ಪಿ. ಎಸ್., ಎಂ.ಕಾಂ., ಎಲ್?ಎಲ್?ಎಂ.

ಪಿರ್ಯಾದುದಾರರುಃ ಅಜ್ಜಂಪುರ ಪೊಲೀಸ್ ಠಾಣೆ

– ವಿರುದ್ಧ –

ಆರೋಪಿತರಾದಃ ಶ್ರೀ ಸೋಮಶೇಖರ.ಬಿ.ಇ.
ಬಿನ್ ಶ್ರೀ ಈಶ್ವರಪ್ಪ.ಎಸ್.ಎಂ,
ವಯಸು 47 ವರ್ಷಗಳು,
ವಾಸಃ ಬೇಲೇನಹಳ್ಳಿ ಗ್ರಾಮ,
ತರೀಕೆರೆ ತಾಲ್ಲೂಕು.

:: ಆರೋಪಣೆ ::

ಸಂತೋಷ ಕುಮಾರ ಪಿ. ಎಸ್., ಎಂ.ಕಾಂ., ಎಲ್?ಎಲ್?ಎಂ., ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ತರೀಕೆರೆ ಆದ ನಾನು, ಈ ಮೂಲಕ ಆರೋಪಿಯಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ-

ದಿನಾಂಕ 30.10.2021 ರಂದು ಸಂಜೆ 5.20 ಗಂಟೆ ಸಮಯಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಅಜ್ಜಂಪುರ ಪಟ್ಟಣದ ಕನ್ನಡ ನೂತನ ಶಾಲೆಯ ಹತ್ತಿರ ಜಯಣ್ಣ ಎಂಬುವವರ ಜಮೀನಿನ ಮುಂದೆ ಹಾದು ಹೋಗಿರುವ ರಾಜ್ಯ ಹೆದ್ದಾರಿ 24 ರಲ್ಲಿ ಅಜ್ಜಂಪುರ ಕಡೆಯಿಂದ ತರೀಕೆರೆ ಕಡೆಗೆ ಅರೋಪಿಯಾದ ನೀವು ಕಬ್ಬಿಣದ ಯಾಂಗ್ಲರ್ ಗಳನ್ನು ತುಂಬಿದ್ದ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಸಂಖ್ಯೆ ಕೆಎ-66-ಟಿ-4906 ಮತ್ತು ಕೆಎ-66-ಟಿ-4907 ನ್ನು ತಿರುವು ರಸ್ತೆಯಲ್ಲಿ ಅತೀವೇಗವಾಗಿ ಚಲಾಯಿಸಿದ್ದರಿಂದ ಕಬ್ಬಿಣದ ಯಾಂಗ್ಲರ್ ತುಂಬಿದ್ದ ಟ್ರ್ಯಾಕ್ಟರ್ ನ ಟ್ರೈಲರ್ ಬ್ಯಾಲೆನ್ಸ್ ತಪ್ಪಿ ಪಲ್ಟಿಯಾಗಿ ಬಿದಿದ್ದು, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಟ್ರ್ಯಾಕ್ಟರ್ ಮತ್ತು ಟ್ರೈಲರ್ ಸಂಖ್ಯೆ ಕೆಎ-66-ಟಿ-4906 ಮತ್ತು ಕೆಎ-66-ಟಿ-4907 ನ್ನು ತಿರುವು ರಸ್ತೆಯಲ್ಲಿ ಅತೀವೇಗವಾಗಿ ಚಲಾಯಿಸಿದ್ದರ ಪರಿಣಾಮ ಟ್ರೈಲರ್ ನ ಮೇಲೆ ಕುಳಿತಿದ್ದ ಚಾಸಾ-

1 ಶ್ರೀ ಗೋವಿಂದಪ್ಪರವರು ರಸ್ತೆನ ಮೇಲೆ ಹಾರಿ ಬಿದ್ದ ಪರಿಣಾಮ ಅವರಿಗೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 338 ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಟ್ರ್ಯಾಕ್ಟರ್ ಮತ್ತು ಟ್ರೈಲರ್ ಸಂಖ್ಯೆ ಕೆಎ-66-ಟಿ-4906 ಮತ್ತು ಕೆಎ-66-ಟಿ-4907 ನ್ನು ತಿರುವು ರಸ್ತೆಯಲ್ಲಿ ಅತೀವೇಗವಾಗಿ ಚಲಾಯಿಸಿದ್ದರ ಪರಿಣಾಮ ಟ್ರ್ಯಾಕ್ಟರ್ ನ ಎಂಜಿನ್‌ನ ಚಾಲಕನ ಎಡ ಪಕ್ಕದಲ್ಲಿ ಕುಳಿತು ಪ್ರಯಾಣಿಸುತ್ತಿದ್ದ ಚಾಸಾ-9 ಶ್ರೀಮತಿ ಲಲಿತ ರವರ ಗಂಡ ಶ್ರೀ ಜಯಪ್ಪ ಯಾನೆ ಜಯಣ್ಣ ರವರು ಟ್ರ್ಯಾಕ್ಟರ್ ಇಂಜಿನಿನ ಬ್ಯಾಲೆನ್ಸ್ ತಪ್ಪಿದ್ದರ ಪರಿಣಾಮ ರಸ್ತೆಯ ಮೇಲೆ ಬಿದ್ದಾಗ ಟ್ರೈಲರ್ ನಲ್ಲಿದ್ದ ಕಬ್ಬಿಣದ ಯಾಂಗ್ಲರ್ ಗಳು ಶ್ರೀ ಜಯಪ್ಪ ರವರ ಹಣೆಗೆ, ತಲೆಗೆ ಮತ್ತು ಕೈ ಕಾಲುಗಳಿಗೆ ತಾಗಿದ ಪರಿಣಾಮ ಕಿವಿ ಮತ್ತು ಬಾಯಿಯಲ್ಲಿ ರಕ್ತ ಸ್ರಾವವಾಗಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುತ್ತಾರೆ, ಆದ್ದರಿಂದ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ಅಡಿ ಶಿಕ್ಷಾರ್ಹ ಅಪರಾಧ ಮಾಡಿರುವಿರಿ.

ಸದರೀ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕ:18.05.2023 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷ್ಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಸಹಿ/-
ಸಿವಿಲ್?ನ್ಯಾಯಾಧೀಶರು ಮತ್ತು ಹೆಚ್ಚುವರಿ
ಜೆಎಂಎಫ್?ಸಿ , ತರೀಕೆರೆ